**Kannada Prabha (Kannada Daily)**

Date: March 23, 2013 Page No.8

Edition: Mysore Language: Kannada

# ‘ಸಮಾನತೆಯೇ ಅಭಿವೃದ್ಧಿ ಮಹಾಮಂತ್ರ’

ಕ.ಪ್ರ.ವಾರ್ತೆ | ಮೈಸೂರು | ಮಾ.22

ದೇಶದ ಸಮಗ್ರ ಅಭಿವೃದ್ಧಿಗೆ ಸಮಾನತೆಯೊಂದೆ ಮಹಾಮಂತ್ರ ಎಂದು ಟಾಟಾ ಸ್ಟೀಲ್ ಸಂಸ್ಥೆ ಉಪಾಧ್ಯಕ್ಷ ಬಿ. ಮುತ್ತುರಾಮನ್ ಹೇಳಿದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಅಭಿವೃದ್ಧಿ ನಿರ್ವಹಣಾ ಸಂಸ್ಥೆ (ಎಸ್‌–ಡಿಎಂಐಎಂಡಿ)ಯ 18ನೇ ಘಟಿಕೋತ್ಸವದಲ್ಲಿ ಶುಕ್ರವಾರ ಅವರು ಮಾತನಾಡಿದರು.

ಭಾರತದಲ್ಲಿ ಅನೇಕ ಸಮಸ್ಯೆಗಳಿದ್ದು, ಅವುಗಳಲ್ಲಿ ಜಾತಿಯತೆ ಹಾಗೂ ಅಸಮಾನತೆ ಪ್ರಮುಖ ಸಾಮಾಜಿಕ ಅನಿಷ್ಟಗಳು ಇಂದಿಗೂ ಜೀವಂತವಾಗಿವೆ. ಇವು ಈ ದೇಶದಲ್ಲಿ ತಲಾತಲಾಂತರದಿಂದ ನಡೆದು ಬಂದಿದೆ. ವ್ಯಕ್ತಿ ಹಾಗೂ ದೇಶದ ಸಮಗ್ರ ಅಭಿವೃದ್ಧಿಗೆ ಸಮಾನತೆ ಕಲ್ಪಿಸುವುದು ಬಹುಮುಖ್ಯ ಗುರಿಯಾಗಬೇಕು ಎಂದರು.

ಭಾರತದ ಆರ್ಥಿಕ ಪ್ರಗತಿಯು ಉತ್ತಮವಾಗಿದ್ದು, ಇದೇ ರೀತಿ ಮುಂದವರಿದರೆ ಮುಂದಿನ 30 – 40 ವರ್ಷಗಳಲ್ಲಿ ಮೂರನೇ ಅತಿದೊಡ್ಡ ಆರ್ಥಿಕ ದೇಶವಾಗುವುದರಲ್ಲಿ ಅನುಮಾನವಿಲ್ಲ. ಇಂದಿನ ಜಾಗತೀಕರಣದ ಯುಗದಲ್ಲಿ ಅನೇಕ ಅವಕಾಶಗಳು ಇರುವಂತೆ ಹಲವು ಸವಾಲುಗಳು ನಮ್ಮ ಮುಂದಿವೆ. ಅದನ್ನು ಎದುರಿಸುವ ಮೂಲಕ ಉತ್ತಮ ರಾಷ್ಟ್ರ ನಿರ್ಮಾಣಕ್ಕೆ ಯುವಜನತೆ ಮುಂದಾಗಬೇಕು ಎಂದು ತಿಳಿಸಿದರು.




ಮೈಸೂರಿನ ಎಸ್‌ಡಿಎಂಐಎಂಡಿಯಲ್ಲಿ ನಡೆದ ಘಟಿಕೋತ್ಸವದಲ್ಲಿ ಎಸ್‌ಡಿಎಂ ಸಂಸ್ಥೆ ಅಧ್ಯಕ್ಷರೂ ಆದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ, ಟಾಟಾ ಸ್ಟೀಲ್ ಸಂಸ್ಥೆ ಉಪಾಧ್ಯಕ್ಷ ಬಿ. ಮುತ್ತುರಾಮನ್, ಆಡಳಿತ ಮಂಡಳಿ ಸದಸ್ಯರಾದ ಡಾ.ಎ.ಕೆ. ಕಾಲ್ರೋ, ಡಾ.ಡಿ. ಸುರೇಂದ್ರಕುಮಾರ್, ಡಾ. ಪ್ರಸನ್ನ ಚಂದ್ರ, ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್ ಇದ್ದರು.

ಭೌತಶಾಸ್ತ್ರ, ರಾಸಾಯನಶಾಸ್ತ್ರ, ಜೀವಶಾಸ್ತ್ರ ಈ ಮುಂತಾದ ವಿಷಯಗಳ ಜತೆಗೆ, ಕಲೆ, ಸಂಗೀತ, ಕ್ರೀಡೆ, ಯೋಗ ಮೊದಲಾದ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

**ಚಿನ್ನದ ಪದಕ ವಿಜೇತರು:** ಸ್ನಾತಕೋತ್ತರ ಪದವಿಯಲ್ಲಿನ ನಿರ್ವಹಣೆ ಅಧ್ಯಯನ ಡಿಪ್ಲೋಮಾದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ನತನಶ್ ಶರ್ಮ 2 ಚಿನ್ನ, ಎಸ್. ಅರುಣ್ ಶಾನ್, ಪ್ರಿಯಾ ಬಾತ್ರ, ನೇಹ ಮಹೇಶ್ವರಿ, ಎಸ್.ಕೆ. ಪದ್ಮಿನಿ ಹಾಗೂ ಐ. ಝುಡ್ಡಿ ಜಯಕುಮಾರ್ ಅವರು ತಲಾ ಒಂದು ಚಿನ್ನದ ಪದಕಕ್ಕೆ ಭಾಜನರಾದರು. ಇವರಲ್ಲಿ ನೇಹ ಮಹೇಶ್ವರಿ ಗೈರಿದ್ದರು. ಎಸ್‌ಡಿಎಂ ಸಂಸ್ಥೆ ಅಧ್ಯಕ್ಷ ಡಿ. ವೀರೇಂದ್ರ ಹೆಗ್ಗಡೆ ಅವರು 164 ಮಂದಿ ನೂತನ ಪದವೀಧರರಿಗೆ ಪದವಿ ಪ್ರದಾನ ಮಾಡಿದರು.

ಆಡಳಿತ ಮಂಡಳಿ ಸದಸ್ಯರಾದ ಡಾ.ಎ.ಕೆ. ಕಾಲ್ರೋ, ಡಾ.ಡಿ. ಸುರೇಂದ್ರಕುಮಾರ್, ಡಾ.ಪ್ರಸನ್ನ ಚಂದ್ರ ಇದ್ದರು. ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್ ಸ್ವಾಗತಿಸಿದರು. ಡಾ. ನೀತು ಗಣಪತಿ ನಿರೂಪಿಸಿದರು. ಡಾ.ಎಚ್. ಗಾಯತ್ರಿ ವಂದಿಸಿದರು.